# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸಹಾಯಕ ಕಾರ್ಯಪಾಲಕ ಅಭಿಯಂತರರ ಕಛೇರಿ, ಲಗ್ಗೆರೆ ಉಪವಿಭಾಗ, 1ನೇ ಮುಖ್ಯರಸ್ತೆ, 3ನೇ ಬ್ಲಾಕ್, ಝೂನ್ ಪಾರ್ಕ್ ಕಾಂಪೌಂಡ್, ನಾಗರಬಾವಿ 2ನೇ ಹಂತ, ಬೆಂಗಳೂರು–560 072**

**ವಾರ್ಡ್ ಸಂಖ್ಯೆ 73 ರಲ್ಲಿ ದಿನಾಂಕ:–23.05.2022 ರಲ್ಲಿ ನಡೆದ ವಾರ್ಡ್ ಸಮಿತಿ ಸಭಾ ನಡವಳಿ.**

ಕೆಳಕಂಡ ಸದಸ್ಯರು ಹಾಗೂ ಅಧಿಕಾರಿಗಳು ಸಭೆಯಲ್ಲಿ ಭಾಗವಹಿಸಿರುತ್ತಾರೆ.

1. ಶ್ರೀ.ವಿಜಯ್ ಕುಮಾರ್, ಮುಖ್ಯ ಅಭಿಯಂತರರು, ರಾ.ರಾನಗರ ವಲಯ
2. ಶ್ರೀ.ಜಿ.ಮೋಹನ್‌ಕುಮಾರ್, ಮಾಜಿ ಸದಸ್ಯರು, ಬಿ.ಬಿ.ಎಂ.ಪಿ, ವಾ–73ಕೊಟ್ಟಿಗೆಪಾಳ್ಯ
3. ಶ್ರೀ.ಡಿ.ಹೇಮಂತ್, ಸಹಾಯಕ ಕಾರ್ಯಪಾಲಕ ಅಭಿಯಂತರರು,
4. ಶ್ರೀ.ಡಿ.ಸಿದ್ದೀಕ್, ಸಹಾಯಕ ಅಭಿಯಂತರರು, ಲಗ್ಗೆರೆ ಉಪ ವಿಭಾಗ.
5. ಶ್ರೀ.ಪ್ರಜ್ವಲ್, ಸಹಾಯಕ ಇಂಜಿನೀಯರ್, ಲಗ್ಗೆರೆ ಉಪ ವಿಭಾಗ.
6. ಶ್ರೀ.ಲಕ್ಷ್ಮೀಕಾಂತ, ಆರೋಗ್ಯ ಪರಿವೀಕ್ಷಕರು,
7. ಶ್ರೀ.ಶೇಖರ್ ನಾಯ್ಕ, ಸಹಾಯಕ ಅಭಿಯಂತರರು, ಬಿ.ಡಬ್ಲ್ಯೂ.ಎಸ್.ಎಸ್.ಬಿ,
8. ಶ್ರೀ.ದಿನೇಶ್.ಎನ್., ಸಹಾಯಕ ಅಭಿಯಂತರರು, ಬಿ.ಡಬ್ಲ್ಯೂ.ಎಸ್.ಎಸ್.ಬಿ,
9. ಶ್ರೀ.ಎಸ್.ವೆಂಕಟೇಶ್ ಬಾಬು, ಮಾಜಿ ಸದಸ್ಯರು.
10. ವಾರ್ಡ್ ಮಾರ್ಷಲ್‌ಗಳು
11. ಸೂಪರ್‌ವೈಸರ್‌ಗಳು
12. ಸಂಘ ಸಂಸ್ಥೆಗಳ ಪದಾಧಿಕಾರಿಗಳು.

ವಾರ್ಡ್ ಸಮಿತಿಯ ಪ್ರಾಸ್ತಾವಿಕ ಸಭೆಯ ಉದ್ದೇಶವನ್ನು ತಿಳಿಸಿ, ಸಭೆಯಲ್ಲಿ ಉಪಸ್ಥಿತರಿದ್ದ ಅಧ್ಯಕ್ಷರು ಸದಸ್ಯರು ಹಾಗೂ ಎಲ್ಲಾ ಅಧಿಕಾರಿಗಳನ್ನು ಸ್ವಾಗತಿಸಿ ಸಭೆಯನ್ನು ನಡೆಸಲು ವಾರ್ಡ್ ಸಮಿತಿ ಅಧ್ಯಕ್ಷರನ್ನು ಕೋರಲಾಯಿತು.

## ಹಿಂದಿನ ಸಭೆಯಲ್ಲಿ ಈ ಕೆಳಕಂಡ ವಿಷಯಗಳ ಬಗ್ಗೆ ಚರ್ಚಿಸಲಾಯಿತು.

- 9ನೇ ಬ್ಲಾಕ್ ನಿವಾಸಿಯಾದ ಶ್ರೀ.ನಾಗರಾಜ್ ರವರು ಈ ಕೆಳಕಂಡ ದೂರು/ಅಹವಾಲುಗಳನ್ನು ಸಲ್ಲಿಸಿದ್ದರು.
  - 9ನೇ ಬ್ಲಾಕ್, 12ನೇ ಎ ಮೈನ್ ರೋಡ್ ರಸ್ತೆಗಳಲ್ಲಿ ಮೋರಿಗಳು ಹೂಳು ತುಂಬಿದ್ದು, ಅವುಗಳನ್ನ ಕೂಡಲೇ ಸ್ವಚ್ಛಗೊಳಿಸುವಂತೆ ತಿಳಿಸಿರುತ್ತಾರೆ.
  - ರಾಜೀವ್‌ಗಾಂಧಿ ಉದ್ಯಾನವನದ ದೊಡ್ಡ ಮೋರಿಗಳು ತುಂಬಿದ್ದು, ಅದನ್ನು ತೆಗೆಯುವಂತೆ ತಿಳಿಸಿರುತ್ತಾರೆ.
- ಹನುಮಗಿರಿ ಲೇಔಟ್‌ನ ನಿವಾಸಿಯಾದ ಶ್ರೀ.ಸಂತೋಷ್ ರವರು ಈ ಕೆಳಕಂಡ ದೂರು/ಅಹವಾಲುಗಳನ್ನು ಸಲ್ಲಿಸಿದ್ದರು.
  - ರಾಜ ಕಾಲುವೆ ಮೋರಿಗಳಲ್ಲಿ ಹೂಳು ತುಂಬಿದ್ದು, ತಡೆಗೋಡೆಗಳು ಹಾಳಾಗಿದ್ದು ಇದಕ್ಕೆ ಕ್ರಮವಹಿಸುವಂತೆ ತಿಳಿಸಿರುತ್ತಾರೆ.
- ಮಲ್ಲೈ ಮಹದೇಶ್ವರ ಬಡಾವಣೆಯ ನಿವಾಸಿಯಾದ ಶ್ರೀ.ಗಿರೀಶ್ ರವರು ಈ ಕೆಳಕಂಡ ದೂರು/ಅಹವಾಲುಗಳನ್ನು ಸಲ್ಲಿಸಿದ್ದರು.
  - ಮಲ್ಲೈಮಹದೇಶ್ವರ ಬಡಾವಣೆ, 1ನೇ ಸಿ ಮೈನ್ ರೋಡ್ ರಸ್ತೆಗಳಲ್ಲಿ ಮೋರಿಗಳು ತುಂಬಿಕೊಂಡಿದ್ದು, ಅವುಗಳನ್ನು ಕೂಡಲೇ ಸ್ವಚ್ಛಗೊಳಿಸುವಂತೆ ತಿಳಿಸಿರುತ್ತಾರೆ.
  - ನಮ್ಮ ಬಡಾವಣೆಯ ಬಸ್ಸು ನಿಲುಗಡೆಯಿಂದ ರಿಂಗ್ ರೋಡ್ ದಾಟಲು ಮೇಲು ಸೇತುವೆ ನಿರ್ಮಿಸುವಂತೆ ತಿಳಿಸಿರುತ್ತಾರೆ.
  - ನಮ್ಮ ಬಡಾವಣೆಯಲ್ಲಿ ಕಳ್ಳತನವಾಗುತ್ತಿದ್ದು, ಎಲ್ಲಾ ರಸ್ತೆಗಳಿಗೆ ಸಿ.ಸಿ ಟಿ.ವಿ ಯನ್ನು ಅಳವಡಿಸುವಂತೆ ಕೋರಿರುತ್ತಾರೆ.

Scanned with CamScanner

- 9ನೇ ಬ್ಲಾಕ್‌ನಲ್ಲಿ ಹೆರಿಗೆ ಆಸ್ಪತ್ರೆ, ಅಂಚೆ ಕಛೇರಿ, ಪಾರ್ಕ್ ಬೇಕೆಂದು ತಿಳಿಸಿರುತ್ತಾರೆ.
- ಎಲ್ಲಾ ರಸ್ತೆಗಳು ಹಾಳಾಗಿದ್ದು, ಕೂಡಲೇ ಡಾಂಬರೀಕರಣ ಮಾಡುವಂತೆ ತಿಳಿಸಿರುತ್ತಾರೆ.

➢ ಅಶ್ವಥನಗರ ನಿವಾಸಿಯಾದ ಶ್ರೀ.ಸಂತೋಷ್ ರವರು ಈ ಕೆಳಕಂಡ ದೂರು/ಅಹವಾಲುಗಳನ್ನು ಸಲ್ಲಿಸಿದ್ದರು.

- ಅಶ್ವಥನಗರ, 2ನೇ ಕ್ರಾಸ್‌ಗಳಲ್ಲಿ ಮೋರಿ ನೀರು ರಸ್ತೆಗೆ ಹರಿಯುತ್ತಿದ್ದು, ಇದರಿಂದ ಸಾರ್ವಜನಿಕರಿಗೆ ತೊಂದರೆಯಾಗುತ್ತಿರುವ ಬಗ್ಗೆ ತಿಳಿಸಿರುತ್ತಾರೆ.

➢ ನಾಗರಬಾವಿ ನಿವಾಸಿಯಾದ ಪ್ರಕೃತಿ ಅಸೋಸಿಯೇಟ್ಸ್ ರವರು ಈ ಕೆಳಕಂಡ ದೂರು/ಅಹವಾಲುಗಳನ್ನು ಸಲ್ಲಿಸಿದ್ದರು.

- 10ನೇ ಮತ್ತು 11ನೇ ಬ್ಲಾಕ್‌ಗಳಲ್ಲಿ ರಸ್ತೆ ಬದಿ ಚರಂಡಿಗಳಲ್ಲಿ ಹೂಳು ತುಂಬಿದ್ದು, ಅದನ್ನು ತೆರವುಗೊಳಿಸುವಂತೆ ತಿಳಿಸಿರುತ್ತಾರೆ. ಹಾಗೂ ರಾಜ ಕಾಲುವೆಯನ್ನು ನಿರ್ಮಿಸುವಂತೆ ತಿಳಿಸಿರುತ್ತಾರೆ.
- ಶ್ರೀನಿವಾಸನಗರ ಮತ್ತು ಮಾರುತಿ ಮಾರ್ಕಂಡೇಶ್ವರ ನಗರಗಳಲಿ ಮೋರಿಗಳಲ್ಲಿ ಸ್ವಚ್ಚಗೊಳಿಸುವಂತೆ ಹಾಗೂ ಮೋರಿ ನೀರು ರಸ್ತೆಗೆ ಹರಿಯುತ್ತಿರುವುದರಿಂದ ತುಂಬಾ ತೊಂದರೆಯಾಗುತ್ತಿದ್ದು, ರಸ್ತೆಗಳು ಹಾಳಾಗಿರುವುದನ್ನು ಕೂಡಲೇ ಕ್ರಮವಹಿಸುವಂತೆ ತಿಳಿಸಿರುತ್ತಾರೆ. ಮತ್ತು ರಸ್ತೆಗಳಿಗೆ ಡಾಂಬರೀಕರಣ ಮಾಡುವಂತೆ ಕೋರಿರುತ್ತಾರೆ.
- ಸಿದ್ದಾರ್ಥ ಬಡಾವಣೆಯ ರಸ್ತೆಗಳಲ್ಲಿ ಮಳೆ ನೀರು ಹಾದು ಹೋಗಲು ಮೋರಿ ವ್ಯವಸ್ಥೆ ಮಾಡುವಂತೆ ಹಾಗೂ ರಸ್ತೆಗಳು ಹಾಳಾಗಿರುವುದರಿಂದ ಕೂಡಲೇ ಸರಿಪಡಿಸುವಂತೆ ಹಾಗೂ ಬೀದಿ ದೀಪಗಳನ್ನು ಸರಿಪಡಿಸುವಂತೆ ಮತ್ತು ಬೆಳಗ್ಗಿನ ಜಾವ ಕೂಡ ಉರಿಯುತ್ತದೆ ಕೂಡಲೇ ಕ್ರಮವಹಿಸುವಂತೆ ತಿಳಿಸಿರುತ್ತಾರೆ.
- ನಮ್ಮ ಬಡಾವಣೆಯ ರಸ್ತೆಗಳಿಗೆ ಡಾಂಬರೀಕರಣ ಮಾಡಿ ಸುಮಾರು 5 ವರ್ಷ ಕಳೆದಿದ್ದು, ರಸ್ತೆಗಳು ಹಾಳಾಗಿರುತ್ತದೆ. ಗುಂಡಿಗಳನ್ನು ಮುಚ್ಚುವಂತೆ ಹಾಗೂ ಡಾಂಬರೀಕರಣ ಮಾಡುವಂತೆ ಕೋರಿರುತ್ತಾರೆ.
- ದ.ರಾ.ಬೇಂದ್ರೆ ಉದ್ಯಾನವನದಲ್ಲಿನ ದೀಪಗಳು ಹಾಳಾಗಿವೆ ಹಾಗೂ 10ನೇ ಬ್ಲಾಕ್ & 11ನೇ ಬ್ಲಾಕ್‌ನಲ್ಲಿ ಬೆಳಗ್ಗಿನ ಜಾವದಲ್ಲಿಯೂ ಕೂಡ ಬೀದಿ ದೀಪಗಳು ಉರಿಯುತ್ತವೆ ಎಂದು ತಿಳಿಸಿರುತ್ತಾರೆ.
- 11ನೇ ಮತ್ತು 10ನೇ ಬ್ಲಾಕ್ ರಸ್ತೆಗಳಲ್ಲಿ ಒಣಗಿರುವ ಮರಗಳನ್ನು ತೆಗೆಸುವಂತೆ ಮತ್ತು ರಸ್ತೆಗೆ ಬಾಗಿರುವ ಕೊಂಬೆಗಳನ್ನು ತೆಗೆಸುವಂತೆ ತಿಳಿಸಿರುತ್ತಾರೆ.

➢ ಅಪೂರ್ವ ಬಡಾವಣೆ ನಿವಾಸಿಯಾದ ಶ್ರೀ.ಜಗದೀಶ್ ಕುಮಾರ್ ರವರು ಈ ಕೆಳಕಂಡ ದೂರು/ಅಹವಾಲುಗಳನ್ನು ಸಲ್ಲಿಸಿದ್ದರು.

- ನಮ್ಮ ಬಡಾವಣೆಯಲ್ಲಿ ರಸ್ತೆಯು ಡಾಂಬರೀಕರಣವಾಗದೇ ಸಂಜೆ ವೇಳೆಯಲ್ಲಿ ಬೀದಿ ದೀಪಗಳು ಇಲ್ಲದೆ ಸಾರ್ವಜನಿಕರಿಗೆ ಓಡಾಡಲು ತೊಂದರೆಯಾಗುತ್ತಿದ್ದು, ಹಾಗೂ ಮಳೆಯಿಂದಾಗಿ ಸೊಳ್ಳೆಗಳು ಹೆಚ್ಚಾಗಿರುವುದರಿಂದ ಅತಿ ಜರೂರಾಗಿ ಕುಂದುಕೊರತೆಗಳನ್ನು ನಿವಾರಿಸುವಂತೆ ಕೋರಿರುತ್ತಾರೆ.
- 9ನೇ ಬ್ಲಾಕ್, 11ನೇ ಮೈನ್ ರೋಡ್ ರಸ್ತೆಗಳಲ್ಲಿ ಮೋರಿಗಳು ಹೂಳು ತುಂಬಿದ್ದು, ಅವುಗಳನ್ನ ಕೂಡಲೇ ಸ್ವಚ್ಚಗೊಳಿಸುವಂತೆ ತಿಳಿಸಿರುತ್ತಾರೆ.

➢ ತೆರಿಗೆ ಭವನ ನಿವಾಸಿಯಾದ ಶ್ರೀ.ಸುಮಂತ್ ರವರು ಈ ಕೆಳಕಂಡ ದೂರು/ಅಹವಾಲುಗಳನ್ನು ಸಲ್ಲಿಸಿದ್ದರು.

- ತೆರಿಗೆ ಭವನ ರಸ್ತೆಗಳ ಫುಟ್‌ಪಾತ್ ಸ್ವಚ್ಚಗೊಳಿಸುವಂತೆ ಮತ್ತು ಸೆಂಟರ್ ಲೈನ್ ಹಾಗೂ ಝೀಬ್ರ ಕ್ರಾಸಿಂಗ್‌ನ್ನು ಹಾಕುವಂತೆ ಕೋರಿರುತ್ತಾರೆ.
- ಮೋರಿಗಳಲ್ಲಿ ಸ್ಲಿಲ್ಟ ತೆಗೆಯುವಂತೆ ಮತ್ತು ಮಳೆ ನೀರು ಹಾದು ಹೋಗುವಂತೆ ಕ್ರಮವಹಿಸಲು ತಿಳಿಸಿರುತ್ತಾರೆ.
- ವಿನಾಯಕರ, ತೆರಿಗೆ ಭವನದಲ್ಲಿ ಫುಟ್ ಬ್ರಿಡ್ಜ್ ನಿರ್ಮಿಸುವಂತೆ ಕೋರಿರುತ್ತಾರೆ.
- ರಸ್ತೆಗೆ ಬಾಗಿರುವ ಮರದ ಕೊಂಬೆಗಳನ್ನು ಕತ್ತಿರುವಂತೆ ತಿಳಿಸಿರುತ್ತಾರೆ.
- ಜನರಲ್ ಹೆಲ್ತ್ ಕೇರ್ ಸೆಂಟರ್‌ಗಳು ಮೆಡಿಸನ್‌ಗಳು ಲಭ್ಯವಾಗುವಂತೆ ಕ್ರಮವಹಿಸಿ ಎಂದು ಕೋರಿರುತ್ತಾರೆ.
- ನಮ್ಮೂರ ತಿಂಡಿ ಬಳಿ ಇರುವ ಉದ್ಯಾನವನ್ನು ಸ್ವಚ್ಚಗೊಳಿಸಿ ಸಾರ್ವಜನಿರಿಗೆ ಅನುಕೂಲ ಮಾಡಿಕೊಡುವಂತೆ ಕೋರಿರುತ್ತಾರೆ.

**ಸಭೆಯ ನಡವಳಿಗಳಲ್ಲಿದ್ದ ವಿಷಯಕ್ಕೆ ತೆಗೆದುಕೊಂಡ ಕ್ರಮದ ಬಗ್ಗೆ ಓದಿ ರೆಕಾರ್ಡ್ ಮಾಡಿರುವುದು.**

| ಕ್ರ ಸಂ | ವಿಷಯ ಸೂಚಿ | ಚರ್ಚಿಸಿದ ವ್ಯಕ್ತಿಯ ಹೆಸರು ಮತ್ತು ದೂರವಾಣಿ ಸಂಖ್ಯೆ | ನಿರ್ಣಯ | ಕ್ರಮ ತೆಗೆದುಕೊಳ್ಳಬೇಕಾದ ಅಧಿಕಾರಿ |
|---|---|---|---|---|
| 1 | ಸುಂಕದಕಟ್ಟೆ ಸೊಲ್ಲಾಪುರದಮ್ಮ ಬಡಾವಣೆ ವಿದ್ಯಾನಿಕೇತನ ಸ್ಕೂಲ್ ಹತ್ತಿರ ಸಣ್ಣ ನೀರುಗಾಲುವೆಯಲ್ಲಿ ಕಸ ತುಂಬಿದ್ದು, ಮಳೆ ನೀರು ಹೊರಗೆ ಹರಿಯುವಂತೆ, ಬ್ಲಾಕ್ ಆಗಿರುವುದನ್ನು ಶೀಘ್ರವಾಗಿ ಸರಿಪಡಿಸುವಂತೆ ಕೋರಿರುತ್ತಾರೆ. | ನವೀನ್ ಕುಮಾರ್ | ಪ್ರಗತಿಯಲ್ಲಿದೆ. | ಸಹಾಯಕ ಕಾರ್ಯಪಾಲಕ ಅಭಿಯಂತರರು, ಬೃಹತ್ ನೀರುಗಾಲುವೆ |

Scanned with CamScanner

| | | | | |
|---|---|---|---|---|
| 2 | ವಾರ್ಡ್‌ವ್ಯಾಪ್ತಿಯಲ್ಲಿ ಮಳೆಗಾಲವಿರುವುದರಿಂದ ಸೊಳ್ಳೆಗಳನ್ನು ನಿಯಂತ್ರಿಸಲು ಔಷಧಿ ಸಿಂಪಡಿಸಲು ಕೋರಿದ್ದಾರೆ. | ನವೀನ್ ಕುಮಾರ್ | ಮಾಹಿತಿ ರವಾನಿಸಿದೆ | ಸಹಾಯಕ ಕಾರ್ಯಪಾಲಕ ಅಭಿಯಂತರರು, ಘನತ್ಯಾಜ್ಯ ನಿರ್ವಹಣೆ |
| 3 | ವಾರ್ಡ್‌ನಲ್ಲ ರಸ್ತೆಯಲ್ಲಿ ಸ್ಟ್ರೀಟ್ ಲೈಟ್‌ಗಳು ಹಾಳಾಗಿದ್ದು, ಅವುಗಳನ್ನು ಸರಿಪಡಿಸುವಂತೆ ಕೋರಿರುತ್ತಾರೆ. | ನವೀನ್ ಕುಮಾರ್ | ಮಾಹಿತಿ ರವಾನಿಸಿದೆ | ಸಹಾಯಕ ಕಾರ್ಯಪಾಲಕ ಅಭಿಯಂತರರು, ಬೆಸ್ಕಾಂ |
| 4 | 4ನೇ ಮುಖ್ಯರಸ್ತೆ, 2ನೇ ಅಡ್ಡರಸ್ತೆ, 9ನೇ ಬ್ಲಾಕ್, ನಾಗರಬಾವಿ ರಸ್ತೆಗಳಲ್ಲಿ ಬೀದಿ ದೀಪಗಳು ಹಾಳಾಗಿರುವುದಾಗಿ ತಿಳಿಸಿರುತ್ತಾರೆ. | ಎಂ.ಕಾಶಿ | ಮಾಹಿತಿ ರವಾನಿಸಿದೆ | ಸಹಾಯಕ ಕಾರ್ಯಪಾಲಕ ಅಭಿಯಂತರರು, ಬೆಸ್ಕಾಂ |
| 5 | 11ನೇ ಮುಖ್ಯರಸ್ತೆ, 5ನೇ ಅಡ್ಡರಸ್ತೆ ಮಾರಮ್ಮ ಪಾರ್ಕ್ ರಸ್ತೆ, ಇಲ್ಲಿ ಮೋರಿ ನಿರ್ಮಿಸಲು ಕೋರಿರುತ್ತಾರೆ. | ಎಂ.ಕಾಶಿ | ಮಾಹಿತಿ ರವಾನಿಸಿದೆ | ಸಹಾಯಕ ಕಾರ್ಯಪಾಲಕ ಅಭಿಯಂತರರು, ಬೃಹತ್ ನೀರುಗಾಲುವೆ |
| 6 | ಬಂಡೆಮಾರಮ್ಮ ಉದ್ಯಾನವನ ಮತ್ತು ಝುನ್ ಉದ್ಯಾನವ ಹಾಳಾಗಿದ್ದು, ಒಣಗಿರುವ ಮರಗಳನ್ನು ತೆರವುಗೊಳಿಸುವಂತೆ ಕೋರಿರುತ್ತಾರೆ. | ಎಂ.ಕಾಶಿ | ಮಾಹಿತಿ ರವಾನಿಸಿದೆ | ಸಹಾಯಕ ಕಾರ್ಯಪಾಲಕ ಅಭಿಯಂತರರು, ಘನತ್ಯಾಜ್ಯ ನಿರ್ವಹಣೆ |
| 7 | ಬಿ.ಡಬ್ಲ್ಯೂ.ಎಸ್.ಎಸ್.ಬಿ ರವರು ಪೈಪ್‌ಲೈನ್‌ಗಳನ್ನು ಹಾಕಿದ್ದು, ಇಂದಿರಾ ಪಾರ್ಕ್,ವಾಟರ್ ಪ್ಲಾಂಟ್‌ನ ಬಳಿ ಗುಂಡಿಗಳನ್ನು ಮುಚ್ಚಿರುವುದಿಲ್ಲ ಎಂದು ತಿಳಿಸಿರುತ್ತಾರೆ. | ಸುಮಿತ್ರಮ್ಮ | ಪ್ರಗತಿಯಲ್ಲಿದೆ. | ಸಹಾಯಕ ಕಾರ್ಯಪಾಲಕ ಅಭಿಯಂತರರು, ಕಾಮಗಾರಿ |
| 8 | ಕೆಂಚಮ್ಮ ಚೌಟರಿ, 40 ಅಡಿರಸ್ತೆಗಳಲ್ಲಿ ಪಾಟ್‌ಹೋಲ್ಸ್‌ಗಳನ್ನು ಮುಚ್ಚಿರುವುದಿಲ್ಲ. | ಸುಮಿತ್ರಮ್ಮ | ಪ್ರಗತಿಯಲ್ಲಿದೆ. | ಸಹಾಯಕ ಕಾರ್ಯಪಾಲಕ ಅಭಿಯಂತರರು, ಕಾಮಗಾರಿ |
| 9 | 6ನೇ ಕ್ರಾಸ್, ಶ್ರೀನಿವಾಸನಗರ ರಸ್ತೆಗಳಲ್ಲಿ ಕಲ್ವರ್ಟ್‌ಗಳು ತುಂಬಿದ್ದು, ಅದನ್ನು ತೆರವುಗೊಳಿಸುವಂತೆ ಸೂಚಿಸಿರುತ್ತಾರೆ. | ಸುಮಿತ್ರಮ್ಮ | ಪ್ರಗತಿಯಲ್ಲಿದೆ. | ಸಹಾಯಕ ಕಾರ್ಯಪಾಲಕ ಅಭಿಯಂತರರು, ಕಾಮಗಾರಿ |
| 10 | 13ನೇ ಕ್ರಾಸ್, ಮುತ್ತುರಾಯಸ್ವಾಮಿ ಬಡಾವಣೆಗಳಲ್ಲಿ ಮರದ ಕೊಂಬೆಗಳನ್ನು ಕತ್ತರಿಸುವಂತೆ ತಿಳಿಸಿರುತ್ತಾರೆ. | ಸುಮಿತ್ರಮ್ಮ | ಮಾಹಿತಿ ರವಾನಿಸಿದೆ | ಸಹಾಯಕ ಕಾರ್ಯಪಾಲಕ ಅಭಿಯಂತರರು, ಬೆಸ್ಕಾಂ |
| 11 | ಮಾಗಡಿ ಮುಖ್ಯರಸ್ತೆಯಿಂದ ಸೊಲ್ಲಾಪುರದಮ್ಮ ದೇವಸ್ಥಾನದ ವರೆಗೂ, 3ನೇ ಕ್ರಾಸ್, ಸೇಟು ಅಂಗಡಿ ಹತ್ತಿರ, ಸ್ಲಿಲ್ವ್‌ಗಳನ್ನು ತೆರವುಗೊಳಿಸುವಂತೆ ಕೋರಿರುತ್ತಾರೆ. | ಸುಮಿತ್ರಮ್ಮ | ಪ್ರಗತಿಯಲ್ಲಿದೆ. | ಸಹಾಯಕ ಕಾರ್ಯಪಾಲಕ ಅಭಿಯಂತರರು, ಕಾಮಗಾರಿ |
| 12 | 6ನೇ ಕ್ರಾಸ್, ಮುತ್ತುರಾಯಸ್ವಾಮಿ ಬಡಾವಣೆ, ಶನಿಮಹಾತ್ಮ ದೇವಸ್ಥಾನದ ಬಳಿ ಕಲ್ಲುಗಳು ಬಿದಿದ್ದು, ಅದನ್ನು ತೆಗೆಸುವಂತೆ ತಿಳಿಸಿರುತ್ತಾರೆ. | ಸುಮಿತ್ರಮ್ಮ | ಪ್ರಗತಿಯಲ್ಲಿದೆ. | ಸಹಾಯಕ ಕಾರ್ಯಪಾಲಕ ಅಭಿಯಂತರರು, ಕಾಮಗಾರಿ |

ವಂದನೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

Prajwal N.V
ಸದಸ್ಯ ಕಾರ್ಯದರ್ಶಿ
ಹಾಗೂ ಸಹಾಯಕ ಅಭಿಯಂತರರು
ವಾರ್ಡ್ ನಂ. 73 ಕೊಟ್ಟಿಗೆಪಾಳ್ಯ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ವಾರ್ಡ್ ಸಮಿತಿ ಅಧ್ಯಕ್ಷರು,
ಮುಖ್ಯ ಅಭಿಯಂತರರು(ರಾ.ರಾ.ನ)
ಹಾಗೂ ವಾರ್ಡ್‌ನ ನೋಡಲ್ ಅಧಿಕಾರಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

Scanned with CamScanner